**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್.ಎಫ್.ಸಿ., ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. : 646/2014** **ದಿನಾಂಕಃ 19-05-2026**

**ಸಿ ಡಬ್ಲೂ : 1**

**ಪಿ ಡಬ್ಲೂ : 6**

-----------------------------------------------------------------------------------------------

**19-05-2026 :ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಶಬ್ಬೀರ ಮುರ್ತುಜ ಸಾತಬಚ್ಚೆ |
| ವಯಸ್ಸು | 39 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಸಾಃ ಅಥಣಿ |

**<u>ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ಚಾಸಾ-3 ರಿಂದ 7 ರವರ ಪರಿಚಯ ಇಲ್ಲ. ಆರೋಪಿತರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತ ಎಲ್ಲಿ ಮತ್ತು ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ದಿಃ 13-05-2013 ರಂದು ತಾನು ಕೊಡಲಾದ ಫಿರ್ಯಾದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಪಂಚನಾಮೆ ಜರುಗಿಸುವ ಸಮಯದಲ್ಲಿ ತೆಗೆಯಲಾದ ಫೋಟೊದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮುಂದುವರೆದು ಆ ಫೋಟೊವನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂಬುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ಯಾವುದೇ ಜಾಗವನ್ನು ತೋರಿಸಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಮಾನ್ಯ ಸರ್ಕಾರಿ ವಕೀಲರು ಪಾಟೀ ಸವಾಲಿಗಾಗಿ ಅನುಮತಿ ಕೋರುತ್ತಾರೆ, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿಃ 13-05-2013 ರಂದು 10.30 ಗಂಟೆಗೆ 1 ನೇ ಆರೋಪಿಯು ಅಥಣಿಯ ಅಥಣಿ ತಂಗಡಿ ರಸ್ತೆಯ ಮೇಲೆ ಇಮ್ತಿಯಾಜ್ ಎಂಬುವರ ಜಮೀನು ಹತ್ತಿರ ತಾನು ನಡೆಸುತ್ತಿದ್ದ ಟಾಟಾ ಇಂಡಿಕಾ ಕಂಪನಿಯ ವಿಸ್ಟಾ ಕಾರ

ಅದರ ಕೆ ಎ ನಂ.49 ಎಮ್ 44467 ಅತೀ ಜೋರಿನಿಂದ ಮತ್ತು ನಿರ್ಲಕ್ಷತನದಿಂದ ಮತ್ತು ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದ ಎಂದರೆ ಸರಿಯಲ್ಲ. 2 ನೇ ಆರೋಪಿಯು ತನ್ನ ಹೀರೊ ಹೊಂಡಾ ಸಪ್ಲೆಂಡರ ಪ್ಲಸ್ ಕಂಪನಿಯ ಮೊಟಾರ ಸೈಕಲ್ ಅದರ ನಂ. ಕೆ ಎ 23 ಇಪ್ಪಿ 9231 ಇದರ ಹಿಂದಿನ ಸೀಟ ಮೇಲೆ ತನ್ನ ತಂದೆಯನ್ನು ಕುಡಿಸಿಕೊಂಡು ಅಥಣಿಯ ಕಡೆಯಿಂದ ತಂಗಡಿ ಕಡೆಗೆ ಅತೀ ಜೋರು ಮತ್ತು ನಿರ್ಲಕ್ಷತನದಿಂದ ರಸ್ತೆಯ ಕಡೆ ಗಮನ ಕೊಡದೇ ವಾಹನ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. 1 ನೇ ಮತ್ತು 2ನೇ ಆರೋಪಿ ಒಬ್ಬರಿಗೊಬ್ಬರು ಅಪಘಾತ ಪಡಿಸಿಕೊಂಡಿದ್ದರಿಂದ 2 ನೇ ಆರೋಪಿಗೆ ಸಾದಾ ಗಾಯ ಆಗಿತ್ತು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಹಿಂಬದಿ ಸವಾರನಾದ 2 ನೇ ಆರೋಪಿಯ ತಂದೆ ತಲೆಗೆ ಪೆಟ್ಟಾಗಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಆದರೆ ಸದರಿ ಅಪಘಾತವು ಆರೋಪಿತರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಕುರಿತು ನಾನು ದಿಃ 13-05-2013 ರಂದು ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಫೋಟೊ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ದಿಃ 13-05-2013, 15-05-2013, 20-05-2013 ರಂದು ತಾನು ಪೋಲಿಸರಿಗೆ ನೀಡಲಾದ ಹೇಳಿಕೆಯನ್ನು ಅಲ್ಲಗಳೆದಿದ್ದರಿಂದ ಸದರಿ ಹೇಳಿಕೆಗಳನ್ನು ನಿಪಿ-7 ರಿಂದ 9 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜಿ ಆಗಿರುತ್ತೇನೆ ಎಂದರೆ ಸರಿ. ರಾಜಿ ಆದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.